ಇ) ಹಾಗಿದ್ದಲ್ಲಿ ಸರ್ಕಾರ ಈ ಬಗ್ಗೆ ತೆಗೆದುಕೊಳ್ಳಬೇಕಾದ ಕ್ರಮವೇನು?

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ.

ನ್ಯಾಯಬೆಲೆ ಅಂಗಡಿಯ ಮಾಲೀಕರು ಎಲ್ಲಾ ಪಡಿತರ ವಸ್ತುಗಳನ್ನು ಪಡಿತರ ಚೀಟಿಗೆ ಪಡೆಯುವುದು.

1424 - ಶ್ರೀ ಎ.ಕೆ. ಅನಂತಕೃಷ್ಣ (ಶಿವಾಜಿನಗರ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ನ್ಯಾಯಬೆಲೆ ಅಂಗಡಿಯ ಮಾಲೀಕರು ಎಲ್ಲಾ ಪಡಿತರ ವಸ್ತುಗಳನ್ನು ಪಡಿತರ ಚೀಟಿಗೆ ಪಡೆಯುವಂತೆ ಹಾಗೂ ಪಡಿತರ ಚೀಟಿದಾರರು ತಮಗೆ ಬೇಕಾಗುವಷ್ಟು ಪ್ರಮಾಣದ ಪಡಿತರ ವಸ್ತುಗಳನ್ನು ಹೊಂದುವುದಕ್ಕೆ (ಸಕ್ಕರೆ) ಒತ್ತಾಯ ಮಾಡಲಾಗುತ್ತಿದೆಯೇ ಎಂಬುದರ ಬಗ್ಗೆ ಸರ್ಕಾರದ ಗನಮಕ್ಕೆ ಬಂದಿದೆಯೇ?

2) ಈ ಬಗ್ಗೆ ಅಂದರೆ ಅನೀತಿ ಮತ್ತು ಅಕ್ರಮವಾಗಿ ಒತ್ತಾಯ ಮಾಡುತ್ತಿರುವ ನ್ಯಾಯ ಬೆಲೆ ಅಂಗಡಿಗಳಿಗೆ ಕೂಡಲೇ ನಿಲ್ಲಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗುವುದೇ?

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):

ಅ) ಇಲ್ಲಾ

ಆ) ಉದ್ಭವಿಸುವುದಿಲ್ಲ

ಅಮಾನತ್ತುಗೊಳಿಸಲಾದ ನ್ಯಾಯಬೆಲೆ ಅಂಗಡಿಗಳು

1423 - ಶ್ರೀ ಎ.ಕೆ. ಅನಂತಕೃಷ್ಣ (ಶಿವಾಜಿನಗರ): ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಮಾನತ್ತುಗೊಳಿಸಲಾದ ನ್ಯಾಯಬೆಲೆ ಅಂಗಡಿಗಳನ್ನು ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮಕ್ಕೆ ವಹಿಸಲು ಇಂತಹ ಅಂಗಡಿಗಳ ಪಡಿತರ ಚೀಟಿಗಳ ವ್ಯವಸ್ಥೆಯನ್ನು ವಹಿಸಿಕೊಳ್ಳಲು ಸದರೀ ನಿಗಮಕ್ಕೆ ಸಿಬ್ಬಂದಿಯ ಕೊರತೆ ಹಾಗೂ ಇತರೆ ಹೊಂದಿಕೊಂಡ ಸೌಲಭ್ಯಗಳು ಸಾಕಷ್ಟಿಲ್ಲವೆಂದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಇಂತಹ ನ್ಯಾಯಬೆಲೆ ಅಂಗಡಿಗಳು ಹೊಂದಿದ ಕಾರ್ಡುಗಳನ್ನು ವರ್ಗಾಹಿಸಿದಾಗ ಅವರುಗಳಿಗೆ ಪಡಿತರ ವಸ್ತುಗಳನ್ನು ಪಡೆಯಲು ಅನಾನುಕೂಲತೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಈ ಸ್ಥಿತಿಯನ್ನು ಸರಿಪಡಿಸಲು ಸರ್ಕಾರ ಕೈಗೊಳ್ಳುವ ಉದ್ದೇಶಿತ ಕಾರ್ಯಕ್ರಮಗಳಾವುವು?

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):

ಅ) ಇಂತಹ ಚಿಲ್ಲರೆ ನ್ಯಾಯಬೆಲೆ ಅಂಗಡಿಗಳನ್ನು ವಹಿಸಿಕೊಳ್ಳಲು ಆಹಾರ ಮತ್ತು ನಾಗರೀಕ ಸರಬರಾಜು ನಿಗಮಕ್ಕೆ ಸಾಕಷ್ಟು ಸಿಬ್ಬಂದಿ ಹಾಗೂ ಸೌಲಭ್ಯಗಳು ಇರುವುವು.

ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯ ಸಹ ನಿರ್ದೇಶಕರು ರದ್ದುಪಡಿಸಿದ ನ್ಯಾಯಬೆಲೆ ಅಂಗಡಿಗಳನ್ನು ಆಹಾರ ಮತ್ತು ನಾಗರೀಕ ಸರಬರಾಜು ನಿಗಮಕ್ಕೆ ವಹಿಸಿದಾಗ ಸದರೀ ನ್ಯಾಯಬೆಲೆ ಅಂಗಡಿಗಳನ್ನು ವಹಿಸಿಕೊಂಡು ಸಮರ್ಪಕವಾಗಿ ಉಸ್ತುವಾರಿ ಮಾಡುತ್ತಿದೆ.

ಆ) -ಇಲ್ಲ-

ಇ) ಆದರೂ ಪಡಿತರ ಚೀಟಿದಾರರಿಗೆ ಸುಧಾರಿತ ಸೇವೆಯನ್ನು ನೀಡಲು ಸತತ ಪ್ರಯತ್ನ ಮಾಡಲಾಗುತ್ತಿದೆ.

ಭಾರತ ಆಹಾರ ನಿಗಮವು 'ಎ' ದರ್ಜೆ ಅಕ್ಕಿಯನ್ನು ಸರಬರಾಜು ಮಾಡುವುದು

1422 - ಶ್ರೀ ಎ.ಕೆ. ಅನಂತಕೃಷ್ಣ (ಶಿವಾಜಿನಗರ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಭಾರತ ಆಹಾರ ನಿಗಮವು 'ಎ' ದರ್ಜೆ ಅಕ್ಕಿಯನ್ನು ಸರಬರಾಜು ಮಾಡುವಲ್ಲಿ ಖಾಸಗೀಯವರಿಗೆ ಮತ್ತು ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮಕ್ಕೆ ತಾರತಮ್ಯ ತೋರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗೂ ಇದರಿಂದ ಜನಸಾಮಾನ್ಯರಿಗೆ 'ಎ' ದರ್ಜೆಯ ಅಕ್ಕಿಯನ್ನು ಪೂರೈಸಲು ನಿರಾಕರಿಸುತ್ತಿದೆಯೇ?

2) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರವು ಕೈಗೊಳ್ಳಬಹುದಾದ ಕ್ರಮಗಳೇನು?

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

1) ಇಲ್ಲ.

2) ಉದ್ಭವಿಸುವುದಿಲ್ಲ.

ಕಡಲೇಕಾಯಿ ಎಣ್ಣೆ ಬೆಲೆಯ ಬಗ್ಗೆ.

1596 - ಶ್ರೀ ಎ.ಕೆ. ಅನಂತಕೃಷ್ಣ (ಶಿವಾಜಿನಗರ) : ಮಾನ್ಯ ಆಹಾರ ಮತ್ತು ನಾಗರೀಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರವು ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾ ಮಂಡಳಿಗೆ ಕಡಲೇಕಾಯಿ ಎಣ್ಣೆಯ ಸಗಟು ಮಾರಾಟ ಬೆಲೆ ರೂ.37.00 ಮತ್ತು ಚಿಲ್ಲರೆ ಬೆಲೆ ರೂ. 38.00 ಪ್ರತಿ ಕಿಲೋದಂತೆ ನಿಯಂತ್ರಿಸಲು ಸಲಹೆ ಮಾಡಿದೆಯೇ?

ಆ) ಕಡಲೇಕಾಯಿ ಎಣ್ಣೆ ಬೆಲೆ ರೂ. 42.00ರಿಂದ ರೂ. 35.50ಗೆ ಇಳಿದಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಮುಂಬಯಿಯಲ್ಲಿ ಎಣ್ಣೆ ಬೆಲೆ ಇಳಿದಿದ್ದು ಕರ್ನಾಟಕದಲ್ಲಿ ಏಕೆ ಕಡಿಮೆ ಆಗಿಲ್ಲ?

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) ಹೌದು - ಕಡಲೇಕಾಯಿ ಎಣ್ಣೆ ಬೆಲೆ ಪ್ರತಿ ಕಿಲೋಗೆ ರೂ. 40.00ರಷ್ಟು ಇದ್ದಾಗ ಈ ಕ್ರಮ ಕೈಗೊಂಡಿತ್ತು.